KACB010019152022

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಬಳ್ಳಾಪುರ

ವಿಶೇಷ ಅಪರಾಧಿಕ ಪ್ರಕರಣ ಸಂಖ್ಯೆ: 31/2022

ಪಿರ್ಯಾದುದಾರರು ಕರ್ನಾಟಕ ಸರ್ಕಾರದ ಪರವಾಗಿ ಪೋಲಿಸ್ ಉಪಾಧೀಕ್ಷಕರು,
ಚಿಕ್ಕಬಳ್ಳಾಪುರ ಉಪ ವಿಭಾಗ, ಚಿಕ್ಕಬಳ್ಳಾಪುರ ಜಿಲ್ಲೆ

(ಚೇಳೂರು ಪೋಲಿಸ್ ಠಾಣೆ, ಚೇಳೂರು)

ವಿರುದ್ಧ

ಆರೋಪಿತರು :

1. ವೆಂಕಟರವಣಪ್ಪ ಬಿ. ಅಲಿಯಾಸ್ ಬೀರಂಗಿ ವೆಂಕಟರವಣಪ್ಪ ಬಿನ್ ಲೇಟ್ ಸುಬ್ಬಣ್ಣ 70 ವರ್ಷ
2. ಜಗದೀಶ್ ವಿ. ಬಿನ್ ಚಿನ್ನವೆಂಕಟರವಣಪ್ಪ 40 ವರ್ಷ
3. ಶ್ರೀಮತಿ ವನಿತಾ ವಿ. ಕೋಂ ಜಗದೀಶ್ 32 ವರ್ಷ
4. ಚಿನ್ನವೆಂಕಟರವಣಪ್ಪ ಬಿನ್ ಬೀರಂಗಿ ಸುಬ್ಬಣ್ಣ 66 ವರ್ಷ
5. ಶ್ರೀಮತಿ ಜಯರತ್ನಮ್ಮ ಕೋಂ ಚಿನ್ನವೆಂಕಟರವಣಪ್ಪ 60 ವರ್ಷ
6. ಶ್ರೀಮತಿ ವೆಂಕಟಮ್ಮ ಕೋಂ ಬಿ. ವೆಂಕಟರವಣಪ್ಪ 65 ವರ್ಷ

ಎಲ್ಲರ ವಾಸಃ ವೆಂಕಟಪುರ ಗ್ರಾಮ, ಚೇಳೂರು ಹೋಬಳಿ,
ಬಾಗೇಪಲ್ಲಿ ತಾಲ್ಲೂಕು

**ದೋಷಾರೋಪಣೆ**

ಶಿವಪ್ರಸಾದ್ ಕೆ.ಬಿ. ಬಿ.ಕಾಂ. ಎಲ್.ಎಲ್.ಬಿ., ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಬಳ್ಳಾಪುರ ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ಮಾಡುತ್ತಿದ್ದೇನೆ.

ಮೊದಲನೇಯದಾಗಿ, ಚೇಳೂರು ಪೋಲಿಸ್ ಠಾಣಾ ಸರಹದ್ದಿಗೆ ಸಂಬಂಧಿಸಿದಂತೆ ಘಟನೆಯ ದಿನಾಂಕಕ್ಕೆ ಎರಡು ತಿಂಗಳ ಹಿಂದೆ, ಚಾಸಾ-1-ಬೋವಿ ರಾಮಪ್ಪ ಮತ್ತು ಚಾಸಾ-2 ನಾಗಮ್ಮ ರವರು ಪರಿಶಿಷ್ಟ ಜಾತಿಯ ಬೋವಿ ಜನಾಂಗಕ್ಕೆ ಸೇರಿದವರೆಂದು ಗೊತ್ತಿದ್ದೂ ಒಕ್ಕಲಿಗ ಜನಾಂಗಕ್ಕೆ ಸೇರಿದ 1 ಮತ್ತು 3 ನೇ ಆರೋಪಿತರು, ಚಾಸಾ-1 ರವರ ಸ್ವಾಧೀನಾನುಭವದಲ್ಲಿರುವ ಜಮೀನನ್ನು ದುರುದ್ದೇಶಪೂರ್ವಕವಾಗಿ ವಶಪಡಿಸಿಕೊಳ್ಳುವ ಉದ್ದೇಶದಿಂದ ಅವರಿಗೆ ಸೇರಿದ ಸರ್ವೆ ನಂ.36/6 ರಲ್ಲಿನ 1 ಎಕರೆ 2 ಗುಂಟೆ ಜಮೀನನ್ನು ಆತನ ಸೊಸೆಯಂದಿರಾದ ಶ್ರೀಮತಿ ರೋಹಿಣಿ ಮತ್ತು 3 ನೇ ಆರೋಪಿ-ವನಿತಾ ರವರಿಗೆ ನೊಂದಣಿ ಮಾಡಿಕೊಟ್ಟು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಮೇಲಿನವರ ಕಲಂ.**3(1)(f)** (ದೌರ್ಜನ್ಯ ಪ್ರತಿಬಂಧ) ತಿದ್ದುಪಡಿ ವಿಧೇಯಕ-2015 ರಡಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿರುತ್ತದೆ.

ಎರಡನೇಯದಾಗಿ**,** ದಿನಾಂಕಃ 12.07.2022 ರಂದು ಬೆಳಗ್ಗೆ 11.30 ಗಂಟೆ ಸಮಯದಲ್ಲಿ ಬಾಗೇಪಲ್ಲಿ ತಾಲ್ಲೂಕು, ಚೇಳೂರು ಹೋಬಳಿ, ವೆಂಕಟಾಪುರ ಗ್ರಾಮದ ಸರ್ವೆ ನಂ.36/6 ರ ಜಮೀನಿನಲ್ಲಿನ ಬದುವಿನ ಬಳಿ, ಚಾಸಾ-1 ಮತ್ತ 2 ರವರು ತಮ್ಮ ಜಮೀನು ಸರ್ವೆ ನಂ.36/6 ರ ಬದುವಿನ ಬಳಿ ನೆಟ್ಟದ್ದ ತೆಂಗಿನ ಗಿಡಗಳಿಗೆ ನೀರನ್ನು ಹಾಕುತ್ತಿದ್ದು, ಚಾಸಾ-1 ಮತ್ತು 2 ರವರು ಪುನಃ ನೀರು ತರಲು ರಸ್ತೆ ಬಳಿ ಬಂದಾಗ, 1 ನೇ ಆರೋಪಿಯು ಸದರಿ ಜಮೀನನ್ನು ತನ್ನ ಸೊಸೆಯಂದರಿಗೆ ನೊಂದಣಿ ಮಾಡಿದ ವಿಚಾರವನ್ನು ಚಾಸಾ-1 ರವರು ಕೇಳಿ ಗಲಾಟೆಗಳಾಗಿ ದ್ವೇಷ ಉಂಟಾದ ಹಿನ್ನೆಲೆಯಲ್ಲಿ, 1 ರಿಂದ 6 ನೇ ಆರೋಪಿತರು ಚಾಸಾ-1 ರವರ ವಿರುದ್ಧ ಕೃತ್ಯ ಎಸಗುವ ಏಕೈಕ ಉದ್ದೇಶದಿಂದ ವಿಧಿ ವಿರುದ್ಧ ಕೂಟವನ್ನು ಕಟ್ಟಿಕೊಂಡು ಬಂದು, ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 143 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿರುತ್ತದೆ.

ಮೂರನೇಯದಾಗಿ**,** ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 6 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಚಾಸಾ-1 ರವರ ವಿರುದ್ಧ ದೊಂಬಿಯನ್ನು ಎಬ್ಬಿಸಿ, ಆರೋಪಿತರಾದ ನೀವು ಭಾರತ ದಂಡ ಸಂಹಿತೆ

ಕಲಂ 147 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿರುತ್ತದೆ.

ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 6 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 2 ನೇ ಆರೋಪಿ-ಜಗದೀಶ್ ನಾದ ನೀವು ಚಾಸಾ-1 ರವರ ಜೊತೆ ಗಲಾಟೆ ಮಾಡಿ ಕೈಯಿಂದ ಹೊಡೆದು ರಸ್ತೆ ಬದಿ ಇದ್ದ ಕಲ್ಲುಗಳ ಬಳಿ ತಳ್ಳಿ ಅವರ ಬಲಮೊಣಕೈ ಬಳಿ, ಕಾಲುಗಳಿಗೆ, ಎಡ ಮೊಣಕಾಲಿಗೆ ಮತ್ತಿತರೇ ಕಡೆ ತರಚಿದ ಗಾಯಮಾಡಿದ್ದು, 5 ನೇ ಆರೋಪಿತೆ-ಜಯರತ್ನಮ್ಮ ಹಾಗೂ 6 ನೇ ಆರೋಪಿತೆ-ವೆಂಕಟಮ್ಮ ರಾದ ನೀವು ಚಾಸಾ-2 ರವರ ಜುಟ್ಟನ್ನು ಹಿಡಿದು ಎಳೆದಾಡಿ ನೋವುಂಟು ಮಾಡಿದ್ದು, ನಂತರ 1 ನೇ ಆರೋಪಿ-ಬೀರಂಗಿ ವೆಂಕಟರವಣಪ್ಪ ಮತ್ತು 3 ನೇ ಆರೋಪಿ-ಚಿನ್ನ ವೆಂಕಟರವಣಪ್ಪ ರಾದ ನೀವು ಚಾಸಾ-2 ರವರನ್ನು ಕೈಯಿಂದ ರಸ್ತೆಯ ಬದಿಯಲ್ಲಿದ್ದ ಕಲ್ಲುಗಳ ಮೇಲೆ ತಳ್ಳಿ, ಅವರ ಕಾಲುಗಳಿಗೆ, ಮೊಣಕೈಗೆ ಮತ್ತಿತರೆ ಕಡೆಗಳಲ್ಲಿ ತರಚಿದ ಗಾಯಗಳನ್ನುಂಟುಮಾಡಿ, ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿರುತ್ತದೆ.

ಐದನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 6 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ಗಲಾಟೆ ಬಿಡಿಸಲು ಅಡ್ಡ ಹೋದ ಚಾಸಾ-2 ನಾಗಮ್ಮ ನವರಿಗೆ 3 ನೇ ಆರೋಪಿತೆ- ವನಿತಾ ನಾದ ನೀವು ಚಾಸಾ-2 ರವರ ಮುಖಕ್ಕೆ ಎಂಜಲು ಉಗಿದಿದ್ದು ಹಾಗೂ ನಿಮ್ಮ ಪೈಕಿ 2 ನೇ ಆರೋಪಿ-ಜಗದೀಶ್ ನಾದ ನೀವು ಚಾಸಾ-1 ರವರಿಗೆ ಜೊತೆ ಗಲಾಟೆ ಮಾಡಿ ಹಾಗೂ ಅವರನ್ನು ಕುರಿತು ತೆಂಗಿನ ಗಿಡಕ್ಕೆ ನೀರು ಹಾಕಬೇಡ ಇದು ನಿಮ್ಮಪ್ಪನ ಜಮೀನಲ್ಲ, ನೀನ್ಯಾರು ಬೆಳೆ ಇಡಕ್ಕೆ ಅಂತ ಹಾಗೂ ಏಮ್ರಾ ರಾಮ್ಗಾ ಲೇ ವಡ್ಡ ನನ್ನ ಮಗನೇ ನಿಂದು ಜಾಸ್ತಿಯಾಯಿತು ಎಂದು ಅವಾಚ್ಯ ಶಬ್ದದಿಂದ ಬೈದು, ಸಾರ್ವಜನಿಕವಾಗಿ ಅವಮಾನಿಸಿ, ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿರುತ್ತದೆ.

ಆರನೇಯದಾಗಿ**,** ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 6 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 2 ನೇ ಆರೋಪಿ-ಜಗದೀಶ್ ನಾದ ನೀವು ಚಾಸಾ-1 ರವರಿಗೆ ಈ ಜಮೀನು ನಮಗೆ ಸೇರಿದ್ದು, ನೀನು ಪದೇ ಪದೇ ಜಮೀನಿನೊಳಗೆ ಬಂದು ತೊಂದರೆ ಕೊಡುತ್ತಿದ್ದೀಯಾ, ಇನ್ನೊಮ್ಮೆ ನಮ್ಮ ಜಮೀನಿನೊಳಗೆ ಬಂದರೆ ಸಾಯಿಸಿಬಿಡುತ್ತೇವೆಂದು ಪ್ರಾಣ ಬೆದರಿಕೆ ಹಾಕಿ, ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿರುತ್ತದೆ.

ಏಳನೇಯದಾಗಿ**,** ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಚಾಸಾ-1 ಮತ್ತು 2 ರವರು ಪರಿಶಿಷ್ಟ ಜಾತಿಯ ಬೋವಿ ಜನಾಂಗಕ್ಕೆ ಸೇರಿದವರೆಂದು ಗೊತ್ತಿದ್ದೂ ಒಕ್ಕಲಿಗ ಜನಾಂಗಕ್ಕೆ ಸೇರಿದ 1 ರಿಂದ 6 ನೇ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 2 ನೇ ಆರೋಪಿತನಾದ ನೀವು ಚಾಸಾ-1 ರವರನ್ನು ಕುರಿತು ಏಮ್ರಾ ರಾಮ್ಗಾ ಲೇ ವಡ್ಡ ನನ್ನ ಮಗನೇ ಹಾಗೂ ಗಲಾಟೆ ಬಿಡಿಸಲು ಬಂದ ಚಾಸಾ-3 ವೆಂಕಟರವಣ ರವರಿಗೆ 2 ನೇ ಆರೋಪಿತನಾದ ನೀವು ಮಾದಿಗ ನನ್ನ ಮಗನೇ ಎಂದು ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರ ದೃಷ್ಟಿಗೆ ಬೀಳುವ ಹಾಗೆ ಉದ್ದೇಶಪೂರ್ವಕವಾಗಿ ಅಪಮಾನ ಮಾಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಮೇಲಿನವರ ಕಲಂ.**3(1)(r)** (ದೌರ್ಜನ್ಯ ಪ್ರತಿಬಂಧ) ತಿದ್ದುಪಡಿ ವಿಧೇಯಕ-2015, ಭಾರತ ದಂಡ ಸಂಹಿತೆ ಸಹವಾಚಕ ಕಲಂ149 ರಡಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿರುತ್ತದೆ.

ಎಂಟನೇಯದಾಗಿ**,** ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಚಾಸಾ-1 ಮತ್ತು 2 ರವರು ಪರಿಶಿಷ್ಟ ಜಾತಿಯ ಬೋವಿ ಜನಾಂಗಕ್ಕೆ ಸೇರಿದವರೆಂದು ಗೊತ್ತಿದ್ದೂ ಒಕ್ಕಲಿಗ ಜನಾಂಗಕ್ಕೆ ಸೇರಿದ 1 ರಿಂದ 6 ನೇ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 2 ನೇ ಆರೋಪಿತನಾದ ನೀವು ಚಾಸಾ-1 ಮತ್ತು 3 ರವರ ಜಾತಿ ಹೆಸರು ಹಿಡಿದು ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರ ದೃಷ್ಟಿಗೆ ಬೀಳುವ ಹಾಗೆ ಉದ್ದೇಶಪೂರ್ವಕವಾಗಿ ಅಪಮಾನ ಮಾಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ

ಮೇಲಿನವರ ಕಲಂ.**3(1)(s)** (ದೌರ್ಜನ್ಯ ಪ್ರತಿಬಂಧ) ತಿದ್ದುಪಡಿ ವಿಧೇಯಕ-2015, ಭಾರತ ದಂಡ ಸಂಹಿತೆ ಸಹವಾಚಕ ಕಲಂ149 ರಡಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿರುತ್ತದೆ.

ಕೊನೇಯದಾಗಿ**,** ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಚಾಸಾ-1 ಮತ್ತು 2 ರವರು ಪರಿಶಿಷ್ಟ ಜಾತಿಯ ಬೋವಿ ಜನಾಂಗಕ್ಕೆ ಸೇರಿದವರೆಂದು ಗೊತ್ತಿದ್ದೂ ಒಕ್ಕಲಿಗ ಜನಾಂಗಕ್ಕೆ ಸೇರಿದ 1 ರಿಂದ 6 ನೇ ಆರೋಪಿತರು ಕೃತ್ಯ ಎಸಗುವ ಸಮಾನ ಉದ್ದೇಶದಿಂದ, ನೀವು ಚಾಸಾ-1 ರವರ ವಿರುದ್ಧ ಕೃತ್ಯ ಎಸಗುವ ಏಕೈಕ ಉದ್ದೇಶದಿಂದ ವಿಧಿ ವಿರುದ್ಧ ಕೂಟವನ್ನು ಕಟ್ಟಿಕೊಂಡು ಬಂದು, ದೊಂಬಿ ಎಬ್ಬಿಸಿ, ಕೈಗಳಿಂದ ತಳ್ಳಿ, ತರಚಿದ ಗಾಯವನ್ನುಂಟುಮಾಡಿ ಹಾಗೂ ಪ್ರಾಣ ಬೆದರಿಕೆ ಹಾಕಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆ ಷೆಡ್ಯೂಲ್ ನಲ್ಲಿ ಕಾಣಿಸಿದ, ಭಾರತೀಯ ದಂಡ ಸಂಹಿತೆ ಕಲಂ143, 147, 323, 506 ರಡಿ ಆರೋಪಿತರು ಅಪರಾದವೆಸಗಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಮೇಲಿನವರ ಕಲಂ.**3(2)(va)** (ದೌರ್ಜನ್ಯ ಪ್ರತಿಬಂಧ) ತಿದ್ದುಪಡಿ ವಿಧೇಯಕ-2015 ಸಹವಾಚಕ ಭಾರತ ದಂಡ ಸಂಹಿತೆ ಕಲಂ149 ರಡಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿರುತ್ತದೆ.

ಮೇಲೆ ಹೇಳಿರುವ ಆರೋಪಗಳಿಗಾಗಿ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ನಾನು ನಿರ್ದೇಶಿಸುತ್ತೇನೆ.

**ದಿನಾಂಕಃ 17.01.2023**

(ಶಿವಪ್ರಸಾದ್ ಕೆ.ಬಿ.)
**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಚಿಕ್ಕಬಳ್ಳಾಪುರ.**

KACB010019152022

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಬಳ್ಳಾಪುರ

ವಿಶೇಷ ಅಪರಾಧಿಕ ಪ್ರಕರಣ ಸಂಖ್ಯೆ: 31/2022

ಪಿರ್ಯಾದುದಾರರು ಕರ್ನಾಟಕ ಸರ್ಕಾರದ ಪರವಾಗಿ ಪೋಲಿಸ್ ಉಪಾಧೀಕ್ಷಕರು,
ಚಿಕ್ಕಬಳ್ಳಾಪುರ ಉಪ ವಿಭಾಗ, ಚಿಕ್ಕಬಳ್ಳಾಪುರ ಜಿಲ್ಲೆ

(ಚೇಳೂರು ಪೋಲಿಸ್ ಠಾಣೆ, ಚೇಳೂರು)

ವಿರುದ್ಧ

ಆರೋಪಿತರು : 6. ಶ್ರೀಮತಿ ವೆಂಕಟಮ್ಮ ಕೋಂ ಬಿ. ವೆಂಕಟರವಣಪ್ಪ 65 ವರ್ಷ
ವಾಸಃ ವೆಂಕಟಪುರ ಗ್ರಾಮ, ಚೇಳೂರು ಹೋಬಳಿ, ಬಾಗೇಪಲ್ಲಿ ತಾಲ್ಲೂಕು

**ದಂ.ಪ್ರ.ಸಂ.ಕಲಂ.228(2)ರಡಿ ಆಪಾದಿತನ ಹೇಳಿಕೆಃ-**

**ಪ್ರಶ್ನೆ ಃ1. ಈಗ ಓದಿ ಹೇಳಿದ ನಿನ್ನ ವಿರುದ್ದ ಮಾಡಲಾಗಿರುವ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿದ್ದೀಯಾ?**

**ಉತ್ತರ ಃ**

**ಪ್ರಶ್ನೆ ಃ2. ನಿನ್ನ ಮೇಲೆ ಮಾಡಲಾಗಿರುವ ದೋಷಾರೋಪಣೆಗೆ ನೀನು ಸಮ್ಮತಿಸುವಿಯೋ ಇಲ್ಲವೇ ವಿಚಾರಣೆಯಾಗಬೇಕೆಂದು ಇಚ್ಚಿಸುವಿಯೋ?**

**ಉತ್ತರ ಃ**

**ಮೇಲೆ ಹೇಳಿದ ಪ್ರಶ್ನೆಗಳನ್ನು ಆಪಾದಿತನಿಗೆ ಅರ್ಥವಾಗುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಿ ಹೇಳಲಾಗಿ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ದಾಖಲಿಸಿಕೊಂಡಿರುವೆ ಎಂದು ದೃಢಪಡಿಸುತ್ತೇನೆ.**

**ಚಿಕ್ಕಬಳ್ಳಾಪುರ**

**ದಿನಾಂಕಃ 17.01.2023**

(ಶಿವಪ್ರಸಾದ ಕೆ.ಬಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿಕ್ಕಬಳ್ಳಾಪುರ